**I Semester B.Com. Examination, November/December 2017**
**(F+R) (CBCS) (2014 – 15 and Onwards)**
**Commerce**
**Paper – 1.3 : FINANCIAL ACCOUNTING – I**

Time : 3 Hours Max. Marks : 70

***Instruction :*** *Answer should be written **completely** either in **English** or in **Kannada**.*

SECTION – A

1. Answer **any five** sub-questions. **Each** sub-question carries **two** marks. **(5×2=10)**
   a) What do you mean by Accounting Standards ?
   b) Mention any two objectives of Financial Accounting.
   c) Bring out the meaning of short working with an example.
   d) What is single entry system ?
   e) State two features of hire purchase system.
   f) What is Realisation Account ?
   g) Mention the two methods of purchase consideration.

SECTION – B

Answer **any three** questions. **Each** question carries **six** marks. **(3×6=18)**

2. Describe any three advantages and three limitations of Financial Accounting.

3. Prepare an analytical table of royalties from the following details :
   a) Minimum Rent ₹ 20,000 p.a.
   b) Royalty ₹ 2.00 per ton of ore raised
   c) Short workings are recoverable during the first 3 years of the lease only
   d) The output for the first 4 years was
   2013 : 2,000 tons,
   2014 : 5,000 tons,
   2015 : 15,000 tons,
   2016 : 20,000 tons

4. Ms. Venya purchases a motor car on hire purchases system. Calculate cash price of the motor car from the following.
Down payment ₹ 20,000 ; 1st yearly installment ₹ 28,000 ; 2nd yearly installment ₹ 36,000 ; 3rd yearly installment ₹ 33,000 ; Rate of interest 10 % p.a.

5. Calculate the total purchases from the following information.

| Particulars | Rs. |
|---|---|
| Opening Balance of creditors | 3,000 |
| Cash paid to creditors | 90,000 |
| Goods returned to creditors | 15,000 |
| Acceptances issued to creditors | 90,000 |
| Discount allowed by creditors | 2,000 |
| Closing balance of creditors | 6,000 |

Cash purchases during the period amounted to Rs. 50,000/-

6. Calculate the amount of purchase consideration from the following :
The purchasing Co., has agreed to issue 30,000 equity shares of ₹ 10 each at a premium of 10 %, 1,000, 8 % preference shares of ₹ 100 each at par, 1,000, 6 % debentures of ₹ 100 each at a discount of 10 % and pay cash equal to ₹ 25,000.

## SECTION – C

Answer **any three** questions. **Each** question carries **14** marks. **(3×14=42)**

7. On 1-1-2012 Deeksha and Company purchased a machinery under hire purchase system. The cash price was ₹ 17,000 payable as under, ₹ 2,000 on signing the agreement and the balance in 3 installments of ₹ 5,000 each together with interest at 8 % p.a. On 31st of December each year the asset is depreciated at 10 % p.a. on original cost method.

   Prepare necessary Ledger Accounts in the books of Deeksha and Co., under asset accrual method.

8. Ms. Monika patented an Automatic Door Closer and granted to Ms. Suraksha the licence to manufacture and sell the Door Closers for 10 years on the following terms.
   a) Suraksha to pay a Royalty of ₹ 5 for every door closer sold with a minimum rent of ₹ 2,500 p.a.
   b) Suraksha could set off the short workings arising in any year against surplus royalties payable in the next 2 years.

c) From the second year onwards the dead rent is agreed upon at ₹ 2,000 instead of ₹ 2,500 and all other terms being unchanged. The other details are :

| **Year** | **Sales (units)** |
|---|---|
| 2013 | 100 |
| 2014 | 200 |
| 2015 | 300 |
| 2016 | 500 |

Show ledger accounts in the books of Suraksha and Co., including minimum rent account.

9. Mr. Ridhansh, a general goods merchant does not maintain his books of accounts systematically. However the following information could be ascertained from his books of accounts for the year ended 31st March 2016.

| **Assets and Liabilities** | **Balances** | |
|---|---|---|
| | **1-4-2015** | **31-3-2016** |
| | ₹ | ₹ |
| Plant and machinery | 63,000 | 63,000 |
| Stock of goods | 28,000 | 24,500 |
| Sundry debtors | 7,000 | 10,500 |
| Sundry creditors | 17,500 | 16,310 |
| Balance at bank | 14,000 | 16,110 |

Cash Transactions during the year ended 31-3-2016 :

| **Particulars** | ₹ |
|---|---|
| Wages paid | 21,000 |
| Sundry expenses | 8,250 |
| Advertisement expenses | 3,920 |
| Rent paid | 8,750 |
| Purchase expenses | 8,610 |
| Cash collected from debtors | 2,88,750 |
| Cash paid to creditors | 2,25,190 |
| Drawings | 10,920 |

Mr. Ridhansh drew goods worth ₹ 2,730/- from the business during the year for his household purposes. The purchase returns and sales returns during the year amounted to ₹ 7,000/- and ₹ 3,500/- respectively. The plant and machinery have to be depreciated at 5 %.

Prepare Trading and Profit and Loss A/c for the year ended 31st March 2016 and also Balance Sheet on the same date.

10. Ram and Prem are partners havings profit sharing ratio of 2 : 1 and their Balance Sheet as on 31-3-2017 was as follows :

| **Liabilities** | ₹ | **Assets** | | ₹ |
|---|---|---|---|---|
| Creditors | 40,000 | Cash in hand | | 300 |
| Bills payable | 10,000 | Bills receivable | | 5,000 |
| Ram's loan | 20,000 | Debtors | 60,000 | |
| Ram's capital | 30,000 | Less : Reserve | 3,000 | 57,000 |
| Prem's capital | 20,000 | Stock | | 43,700 |
| Reserve fund | 6,000 | Machinery | | 20,000 |
| | **1,26,000** | | | **1,26,000** |

They agreed to sell the business to a Limited Co. and the Co., to take over the assets and liabilities as follows :

Machinery at ₹ 16,000, Stock at ₹ 35,000, Debtors at ₹ 50,700. B/R at ₹ 5,000 and Goodwill at ₹ 6,000.

The company agreed to take over Creditors at ₹ 38,000 and B/P at ₹ 10,000. The expenses of realisation amounted to ₹ 300. The firm received ₹ 40,000 of the purchase price in ₹ 10 fully paid equity shares and the balance in cash. Distribute the shares as per original capital ratio.

Prepare the necessary Ledger Accounts in the books of the firm.

11. a) From the following details drawn from the books of Pradeeksha, you are required to ascertain the opening stock :

| | ₹ |
|---|---|
| Purchases made during the year | 22,000 |
| Sales made during the year | 33,000 |
| Closing stock | 2,000 |
| Wages, Freight | 500 |
| Indirect expenses | 700 |
| Rate of gross profit on cost | 50 % |
| Return inwards | 3,000 |
| Return outwards | 2,000 |

b) Calculate the amount of Interest included in each instalment of hire purchase system.

Cash price ₹ 1,50,000, Down payment ₹ 45,000, 3 annual instalment of ₹ 60,000, ₹ 45,000, ₹ 30,000 respectively payable at the end of each year.

## ಕನ್ನಡ ಆವೃತ್ತಿ

### ವಿಭಾಗ - ಎ

1. ಯಾವುದಾದರೂ 5 ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆಗೆ 2 ಅಂಕಗಳು. (5×2=10)

   a) ಲೆಕ್ಕಶಾಸ್ತ್ರ ಪ್ರಮಾಣಕ ಎಂದರೇನು ?

   b) ಹಣಕಾಸು ಲೆಕ್ಕಶಾಸ್ತ್ರದ ಯಾವುದಾದರೂ ಎರಡು ಉದ್ದೇಶಗಳನ್ನು ತಿಳಿಸಿ.

   c) ಕೊರತೆ ಉತ್ಪನ್ನದ ಅರ್ಥವನ್ನು ಒಂದು ಉದಾಹರಣೆಯ ಮೂಲಕ ತಿಳಿಸಿ.

   d) ಏಕ ನಮೂದು ಪದ್ಧತಿ ಎಂದರೇನು ?

   e) ಬಾಡಿಗೆ ಕೊಳ್ಳುವಿಕೆ ವಿಧಾನದ ಎರಡು ಲಕ್ಷಣಗಳನ್ನು ತಿಳಿಸಿ.

   f) ವಿಲೇವಾರಿ ಖಾತೆ ಎಂದರೇನು ?

   g) ಖರೀದಿ ಬೆಲೆಯನ್ನು ಕಂಡುಹಿಡಿಯುವ ಎರಡು ಪದ್ಧತಿಗಳನ್ನು ತಿಳಿಸಿ.

### ವಿಭಾಗ - ಬಿ

ಯಾವುದಾದರೂ 3 ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 6 ಅಂಕಗಳು. (3×6=18)

2. ಹಣಕಾಸು ಲೆಕ್ಕಶಾಸ್ತ್ರದ ಮೂರು ಅನುಕೂಲಗಳು ಮತ್ತು ಮೂರು ಮಿತಿಗಳನ್ನು ವಿವರಿಸಿ.

3. ಈ ಕೆಳಕಂಡ ವಿವರಗಳಿಂದ ರಾಜಧನ ವಿಶ್ಲೇಷಣಾ ಪಟ್ಟಿಯನ್ನು ತಯಾರಿಸಿ :

   a) ಕನಿಷ್ಟ ಬಾಡಿಗೆ ವರ್ಷಕ್ಕೆ ರೂ. 20,000

   b) ರಾಜಧನ ರೂ. 2.00 ಪ್ರತಿ ಟನ್ನಿಗೆ

   c) ಕೊರತೆ ಉತ್ಪಾದನೆಯನ್ನು ಗೇಣಿ ಪಡೆದ ಮೊದಲ 3 ವರ್ಷಗಳಲ್ಲಿ ಮಾತ್ರ ಹಿಂಪಡೆಯುವುದು

   d) ಮೊದಲ ನಾಲ್ಕು ವರ್ಷಗಳ ಉತ್ಪಾದನೆ

      2013 : 2,000 ಟನ್ನುಗಳು

      2014 : 5,000 ಟನ್ನುಗಳು

      2015 : 15,000 ಟನ್ನುಗಳು

      2016 : 20,000 ಟನ್ನುಗಳು

4. ಶ್ರೀಮತಿ ವೆನ್ಯಾ ಮೋಟಾರು ಕಾರನ್ನು ಬಾಡಿಗೆ ಕೊಳ್ಳುವಿಕೆಯ ಪದ್ಧತಿಯಲ್ಲಿ ಖರೀದಿಸಿದಳು. ಈ ಕೆಳಗಿನ ವಿವರಗಳಿಂದ ಆ ಕಾರಿನ ನಗದು ಬೆಲೆಯನ್ನು ಕಂಡುಹಿಡಿಯಿರಿ.
   ಮುಂಗಡ ಹಣ ರೂ. 20,000 ; ಮೊದಲ ವಾರ್ಷಿಕ ಕಂತು ರೂ. 28,000 ; ಎರಡನೇ ವಾರ್ಷಿಕ ಕಂತು ರೂ. 36,000 ; ಮೂರನೇ ವಾರ್ಷಿಕ ಕಂತು ರೂ. 33,000 ; ಬಡ್ಡಿ ದರ ವಾರ್ಷಿಕ ಶೇ. 10.

5. ಕೆಳಗಿನ ಮಾಹಿತಿಯ ಆಧಾರದ ಮೇಲೆ "ಒಟ್ಟು ಸರಕು ಕೊಳ್ಳುವಿಕೆ "ಯನ್ನು ಕಂಡುಹಿಡಿಯಿರಿ.

| ವಿವರಗಳು | ರೂ. ಗಳಲ್ಲಿ |
|---|---|
| ಧನಿಗಳ ಆರಂಭದ ಶಿಲ್ಕು | 3,000 |
| ಸಾಲಿಗರಿಗೆ ಕೊಟ್ಟ ನಗದು | 90,000 |
| ಸಾಲಿಗರಿಗೆ ವಾಪಸ್ಸು ಮಾಡಿದ ಸರಕು | 15,000 |
| ದೇಯ ಹುಂಡಿ ಖಾತೆಗೆ | 90,000 |
| ಧನಿಗಳಿಂದ ಬಂದ ಸೋಡಿ | 2,000 |
| ಧನಿಗಳ ಅಂತ್ಯದ ಶಿಲ್ಕು | 6,000 |
| ವರ್ಷದ ನಗದು ಖರೀದಿ ಮೊತ್ತ | 50,000 |

6. ಈ ಕೆಳಗಿನ ವಿವರಗಳಿಂದ ಖರೀದಿ ಬೆಲೆಯನ್ನು ಕಂಡುಹಿಡಿಯಿರಿ.
ಖರೀದಿಸಿದ ಕಂಪನಿಯು ರೂ. 10 ಮುಖಬೆಲೆಯ 30,000 ಸಾಮಾನ್ಯ ಶೇರುಗಳನ್ನು ಶೇ. 10 ಹೆಚ್ಚುವರಿ ದರದಲ್ಲಿ ನೀಡಿತು. 1,000, ಶೇ. 8 ರ ಪ್ರಥಮ ಹಕ್ಕಿನ ಶೇರುಗಳನ್ನು ಮುಖಬೆಲೆಯ ರೂ. 100 ರಲ್ಲಿ ನೀಡಿತು. 1,000, ಶೇ. 6 ರ ರೂ.100 ಮುಖಬೆಲೆಯ ಸಾಲಪತ್ರಗಳನ್ನು ಶೇ. 10 ರ ರಿಯಾಯಿತಿ ದರದಲ್ಲಿ ನೀಡಿತು ಮತ್ತು ನಗದು ರೂ. 25,000.

## ವಿಭಾಗ - ಸಿ

ಈ ಕೆಳಗಿನ ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **14** ಅಂಕಗಳು. **(3x14=42)**

7. 1-1-2012 ರಂದು ದೀಕ್ಷ ಮತ್ತು ಕಂಪನಿಯು ಒಂದು ಯಂತ್ರವನ್ನು ಬಾಡಿಗೆ ಕೊಳ್ಳುವಿಕೆಯ ಪದ್ಧತಿಯಲ್ಲಿ ಖರೀದಿಸಿತು. ನಗದು ಬೆಲೆ ರೂ. 17,000 ವನ್ನು ಕೊಡುವ ವಿಧಾನ, ರೂ. 2,000 ವನ್ನು ಒಪ್ಪಂದದ ವೇಳೆ ಮತ್ತು ಉಳಿದ ಹಣವನ್ನು ಮೂರು ವಾರ್ಷಿಕ ಕಂತುಗಳಲ್ಲಿ ರೂ. 5,000 ದಂತೆ ವಾರ್ಷಿಕ ಶೇ. 8 ರ ಬಡ್ಡಿಯ ಜೊತೆ ಕೊಡುವುದು. ಯಂತ್ರವನ್ನು ಪ್ರತಿ ವರ್ಷ 31 ಡಿಸೆಂಬರ್ ಶೇ. 10 ರ ದರದಲ್ಲಿ ಒರಿಜಿನಲ್ ಕಾಸ್ಟ್ ರೀತಿಯಲ್ಲಿ ಸವಕಳಿ ಮಾಡಲಾಗುವುದು.
ದೀಕ್ಷ ಮತ್ತು ಕಂಪನಿಯ ಪುಸ್ತಕದಲ್ಲಿ ಅಗತ್ಯವಾದ ಹಂತ ಹಂತವಾಗಿ ಆಸ್ತಿಯನ್ನು ಹೊಂದುವ ಪದ್ಧತಿಯಲ್ಲಿ ಸೂಕ್ತ ಖಾತೆಗಳನ್ನು ತಯಾರಿಸಿ.

8. ಶ್ರೀಮತಿ ಮೋನಿಕ ಎಂಬುವವರು ಆಟೋಮ್ಯಾಟಿಕ್ ಡೋರ್ ಕ್ಲೋಸರ್‌ನ ಪೇಟೆಂಟನ್ನು ಹೊಂದಿದ್ದು, ಶ್ರೀಮತಿ ಸುರಕ್ಷ ಎಂಬುವವರಿಗೆ ಅದನ್ನು ತಯಾರಿಸುವ ಮತ್ತು ಮಾರುವ ಲೈಸೆನ್ಸನ್ನು 10 ವರ್ಷಗಳ ಕಾಲ ಕೆಳಕಂಡ ನಿಬಂಧನೆಗಳ ಆಧಾರದ ಮೇಲೆ ನೀಡಿದಳು :
   a) ಸುರಕ್ಷ ಮಾರಾಟವಾದ ಪ್ರತಿ ಡೋರ್ ಕ್ಲೋಸರ್‌ಗೆ ರೂ. 5 ರ ಪ್ರಕಾರ ರಾಜಧನ ಕೊಡುವುದು ಮತ್ತು ಕನಿಷ್ಟ ಬಾಡಿಗೆ ವಾರ್ಷಿಕ ರೂ. 2,500.
   b) ಸುರಕ್ಷವು ಕೊರತೆ ಉತ್ಪನ್ನವನ್ನು ಮುಂದಿನ 2 ವರ್ಷಗಳಲ್ಲಿ ಹೆಚ್ಚುವರಿ ರಾಜಧನದಿಂದ ಹೊಂದಾಣಿಕೆ ಮಾಡಬಹುದು.

c) ಎರಡನೇ ವರ್ಷದಿಂದ ಕನಿಷ್ಟ ಬಾಡಿಗೆಯನ್ನು ರೂ. 2,500 ರ ಬದಲಿಗೆ ರೂ. 2,000 ರ ಪ್ರಕಾರ ನೀಡುವುದು. ಬೇರೆ ಯಾವುದೇ ನಿಬಂಧನೆ ಬದಲಿಸಿಲ್ಲ. ಬೇರೆ ವಿವರಗಳು :

| ವರ್ಷ | ಮಾರಾಟ (ಪ್ರಮಾಣ) (units) |
|---|---|
| 2013 | 100 |
| 2014 | 200 |
| 2015 | 300 |
| 2016 | 500 |

ಸುರಕ್ಷ ಮತ್ತು ಕಂಪನಿಯ ಪುಸ್ತಕದಲ್ಲಿ ಕನಿಷ್ಟ ಬಾಡಿಗೆಯ ಖಾತೆಯ ಜೊತೆ ಅವಶ್ಯಕ ಖಾತೆಗಳನ್ನು ತಯಾರಿಸಿ.

9. ಶ್ರೀ ರಿದನ್‌ಷ್ ಸಾಮಾನ್ಯ ವ್ಯಾಪಾರಿಯು, ತನ್ನ ವ್ಯಾಪಾರದ ಲೆಕ್ಕಗಳನ್ನು ಸರಿಯಾಗಿ ನಿರ್ವಹಿಸಿಲ್ಲ. ಆದರೆ ಅವರ ಪುಸ್ತಕದಲ್ಲಿ ಮಾರ್ಚ್ 31, 2016 ಕ್ಕೆ ಈ ಕೆಳಕಂಡ ಮಾಹಿತಿಯು ಲಭ್ಯವಿರುತ್ತದೆ.

| ಆಸ್ತಿ ಮತ್ತು ಜವಾಬ್ದಾರಿಗಳು | ಸಮತೋಲನ | |
|---|---|---|
| | 1-4-2015 | 31-3-2016 |
| | ₹ | ₹ |
| ಸ್ಥಾವರಗಳು ಮತ್ತು ಯಂತ್ರಗಳು | 63,000 | 63,000 |
| ದಾಸ್ತಾನು | 28,000 | 24,500 |
| ಸಾಲಗಾರರು | 7,000 | 10,500 |
| ಧನಿಗಳು | 17,500 | 16,310 |
| ಬ್ಯಾಂಕ್ ಖಾತೆಯ ಶಿಲ್ಕು | 14,000 | 16,110 |

ಮಾರ್ಚ್ 31, 2016 ಕ್ಕೆ ನಗದು ವ್ಯವಹಾರಗಳು :

| ವಿವರಗಳು | ರೂ.ಗಳಲ್ಲಿ |
|---|---|
| ಕೂಲಿ ಪಾವತಿ | 21,000 |
| ಇತರೆ ಖರ್ಚುಗಳು | 8,250 |
| ಜಾಹೀರಾತು ವೆಚ್ಚ | 3,920 |
| ಬಾಡಿಗೆ ಪಾವತಿ | 8,750 |
| ಕೊಳ್ಳಿಕೆ ಖರ್ಚುಗಳು | 8,610 |
| ಋಣಿಗಳಿಂದ ಪಡೆದ ನಗದು | 2,88,750 |
| ಧನಿಗಳಿಗೆ ಕೊಟ್ಟ ನಗದು | 2,25,190 |
| ಸ್ವಂತ ಬಳಕೆಗೆ | 10,920 |

2,730 ರೂ.ಗಳ ಮೌಲ್ಯದ ಸರಕುಗಳನ್ನು ಶ್ರೀ ರಿದನ್‌ಷ್ ಸ್ವಂತಕ್ಕೆ ತಮ್ಮ ವ್ಯಾಪಾರದ ಸರಕುಗಳನ್ನು ಬಳಸಿಕೊಂಡಿದ್ದರು. ಖರೀದಿ ವಾಪಸಾತಿ ಹಾಗೂ ಮಾರಾಟ ವಾಪಸಾತಿ ಕ್ರಮವಾಗಿ ರೂ. 7,000 ಮತ್ತು ರೂ. 3,500. ಸ್ಥಾವರ ಮತ್ತು ಯಂತ್ರಗಳ ಮೇಲೆ ಶೇಕಡ 5 ರಷ್ಟು ಸವಕಳಿ.

ಮಾರ್ಚ್ 31, 2016 ಕ್ಕೆ ವ್ಯಾಪಾರ ಮತ್ತು ಲಾಭ ಮತ್ತು ನಷ್ಟ ಖಾತೆ ಹಾಗೂ ಆಸ್ತಿ ಜವಾಬ್ದಾರಿ ಪಟ್ಟಿಯನ್ನು ತಯಾರಿಸಿರಿ.

10. ರಾಮ್ ಮತ್ತು ಪ್ರೇಮ್ ಲಾಭನಷ್ಟಗಳನ್ನು 2 : 1 ರ ಪ್ರಮಾಣದಲ್ಲಿ ಹಂಚಿಕೊಳ್ಳುವ ಪಾಲುದಾರರು ಮತ್ತು ಇವರ ಆಸ್ತಿ ಜವಾಬ್ದಾರಿ ಪಟ್ಟಿ 31-3-2017 ರಲ್ಲಿ ಈ ರೀತಿ ಇದೆ:

| ಜವಾಬ್ದಾರಿಗಳು | ರೂ. | ಆಸ್ತಿಗಳು | | ರೂ. |
|---|---|---|---|---|
| ಧನಿಗಳು | 40,000 | ನಗದು ಕೈಯಲ್ಲಿ | | 300 |
| ಕೊಡಬೇಕಾದ ಹುಂಡಿಗಳು | 10,000 | ಬರಬೇಕಾದ ಹುಂಡಿ | | 5,000 |
| ರಾಮ್‌ರವರ ಸಾಲ | 20,000 | ಋಣಿಗಳು | 60,000 | |
| ರಾಮ್‌ರವರ ಬಂಡವಾಳ | 30,000 | ಮೀಸಲಾತಿ ಕಡಿತ | 3,000 | 57,000 |
| ಪ್ರೇಮ್‌ರವರ ಬಂಡವಾಳ | 20,000 | ದಾಸ್ತಾನು | | 43,700 |
| ಮೀಸಲು ನಿಧಿ | 6,000 | ಯಂತ್ರೋಪಕರಣ | | 20,000 |
| | **1,26,000** | | | **1,26,000** |

ಇವರು ತಮ್ಮ ವ್ಯಾಪಾರ ಸಂಸ್ಥೆಯನ್ನು ಒಂದು ನಿಯಮಿತ ಕಂಪನಿಗೆ ಮಾರಲು ಒಪ್ಪಿಗೆ ನೀಡಿದರು. ಕಂಪನಿಯವರು ಆಸ್ತಿ ಮತ್ತು ಜವಾಬ್ದಾರಿಗಳನ್ನು ಈ ಕೆಳಕಂಡಂತೆ ತೆಗೆದುಕೊಳ್ಳಲು ಒಪ್ಪಿದರು. ಯಂತ್ರೋಪಕರಣಗಳು ರೂ. 16,000, ಸರಕುಗಳು ರೂ.35,000, ಋಣಿಗಳು ರೂ. 50,700, ಬರಬೇಕಾದ ಹುಂಡಿಗಳು ರೂ. 5,000 ಮತ್ತು ಸುನಾಮ ರೂ. 6,000. ಕಂಪನಿಯವರು ಧನಿಗಳನ್ನು 38,000 ರೂ.ಗಳಿಗೆ ತೆಗೆದುಕೊಳ್ಳಲು ಒಪ್ಪಿದರು. ಕೊಡಬೇಕಾದ ಹುಂಡಿಗಳು ರೂ. 10,000 ಕ್ಕೆ, ವಿಸರ್ಜನೆಯ ವೆಚ್ಚ ರೂ. 300. ಪಾಲುದಾರರು 40,000 ರೂ.ಗಳಷ್ಟು ಕೊಳ್ಳುವಿಕೆ ಪರಿಹಾರವನ್ನು ರೂ.10 ಬೆಲೆಯ ಪೂರ್ತಿ ಸಂದಾಯವಾದ ಸಾಮಾನ್ಯ ಶೇರುಗಳಲ್ಲಿಯೂ ಉಳಿದ ಪರಿಹಾರವನ್ನು ನಗದು ರೂಪದಲ್ಲಿಯೂ ಪಡೆದರು. ಶೇರುಗಳನ್ನು ಪಾಲುದಾರರಿಗೆ ಅವರ ಮೂಲ ಬಂಡವಾಳದ ಪ್ರಮಾಣದಲ್ಲಿ ಹಂಚಿರಿ.

ಪಾಲುಗಾರರಿಗೆ ಸಂಸ್ಥೆಯ ಪುಸ್ತಕದಲ್ಲಿ ಅಗತ್ಯವಾದ ಎಲ್ಲಾ ಖಾತೆಗಳನ್ನು ತಯಾರಿಸಿ.

11. a) ಪ್ರದೀಕ್ಷ ಎಂಬುವವರ ಪುಸ್ತಕಗಳಿಂದ ಶೇಖರಿಸಿದ ಈ ಕೆಳಗಿನ ವಿವರಗಳಿಂದ, ನೀವು ಪ್ರಾರಂಭಿಕ ಸರಕನ್ನು ಕಂಡುಹಿಡಿಯಿರಿ :

| | ರೂ. |
|---|---|
| ವರ್ಷದಾಂತ್ಯಕ್ಕೆ ಮಾಡಿದ ಖರೀದಿಗಳು | 22,000 |
| ವರ್ಷದಾಂತ್ಯಕ್ಕೆ ಮಾಡಿದ ಮಾರಾಟಗಳು | 33,000 |
| ಅಂತಿಮ ಸರಕು | 2,000 |
| ಕೂಲಿ, ಸಾಗಾಣಿಕೆ ವೆಚ್ಚ | 500 |
| ನೇರವಲ್ಲದ ಖರ್ಚುಗಳು | 700 |
| ಸ್ಥೂಲ ಲಾಭ ಅನುಪಾತ ಮೂಲ ಬೆಲೆಯ ಮೇಲೆ | ಶೇ. 50 |
| ಒಳಬಂದ ಸರಕು | 3,000 |
| ಹೊರ ಹೋದ ಸರಕು | 2,000 |

b) ಬಾಡಿಗೆ ಕೊಳ್ಳುವಿಕೆ ಪದ್ಧತಿಯ ಪ್ರತಿ ಕಂತಿನಲ್ಲಿ ಇರುವ ಬಡ್ಡಿಯ ಮೊತ್ತವನ್ನು ಕಂಡುಹಿಡಿಯಿರಿ.

ನಗದು ಬೆಲೆ ರೂ. 1,50,000, ಮುಂಗಡ ಪಾವತಿ ರೂ. 45,000, 3 ವಾರ್ಷಿಕ ಕಂತುಗಳಾದ ರೂ. 60,000, ರೂ. 45,000 ಮತ್ತು ರೂ. 30,000 ಕ್ರಮವಾಗಿ ಪ್ರತಿ ವರ್ಷದ ಕೊನೆಯಲ್ಲಿ ಪಾವತಿಸಲಾಗುವುದು.